ದಿನಾಂಕ 20.12.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ.ಜಿ.ಪಿ ವಕೀಲರಿಂದಃ

ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಗೊತ್ತಾ ಎಂದರೆ ಗೊತ್ತಿಲ್ಲ. ಪ್ರತಿವಾದಿ ಅಕ್ರಮ ಸಕ್ರಮದಲ್ಲಿ ಮಂಜೂರಾದ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿದ್ದಾರೆ ಎಂದು ತಿಳಿಸಿದ್ದು ಯಾವಾಗ ಎಂದರೆ ಸಾಕ್ಷಿ 30ನೇ ತಾರೀಖು 2020 ರಂದು 3.30 ಗಂಟೆಗೆ ಅಕ್ರಮವಾಗಿ ಪ್ರವೇಶ ಮಾಡಿ ಬೇಲಿಯನ್ನು ತೆಗೆದಿದ್ದಾರೆ ಎಂದು ಹೇಳುತ್ತಾರೆ. ನೀವು ಅಕ್ರಮ ಮಾಡಿದ ಜಾಗದ ಯಾವ ದಿಕ್ಕಿನ ಬೇಲಿ ತೆಗೆದಿದ್ದಾರೆ ಎಂದರೆ ಸಾಕ್ಷಿ ಪೂರ್ವ ದಿಕ್ಕಿನ ಬೇಲಿ ತೆಗೆದಿದ್ದಾರೆ ಎಂದು ಹೇಳುತ್ತಾರೆ. ಅದು ಸರ್ಕಾರಿ ಜಾಗ ಎಂದರೆ ಸಾಕ್ಷಿ ಅದು ನನ್ನ ವರ್ಗ ಜಾಗದ ಕುಮ್ಕಿ ಎಂದು ಹೇಳುತ್ತಾರೆ. ಅದು ನಿಮ್ಮ ವರ್ಗ ಜಾಗದ ಕುಮ್ಕಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸರ್ವೇ ನಂ. 17/2, 17/3, 17/4, 17/5 ಜಾಗದ ಕುಮ್ಕಿಯಾಗಿರುತ್ತದೆ ಎಂದು ಹೇಳುತ್ತಾರೆ. ಕುಮ್ಕಿ ಯಾವ ಜಾಗಕ್ಕೆ ಹೇಗೆ ಬರುತ್ತದೆ ಎಂದರೆ ಮತ್ತು ನೀವು ಹಾಜರುಪಡಿಸಿದ ಪಹಣಿ ಪತ್ರಿಕೆಯ ಜಾಗಕ್ಕೆ ಕುಮ್ಕಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ವರ್ಗ ಜಾಗಕ್ಕೆ ತಾಗಿ ಬೇರೆ ಯಾರ ಜಾಗ ಇದೆ ಎಂದರೆ ಸಾಕ್ಷಿ ದರ್ಖಾಸು ಜಾಗ ಇರುತ್ತದೆ. ಎಷ್ಟು ಎಕರೆ ಇದೆ ಎಂದರೆ 4.8 ಎಕರೆ ಇದೆ. ಅದು ಯಾರಿಗೆ ಸೇರಿದ ಜಾಗ ಎಂದರೆ ಜಯವರ್ಮ ರವರಿಗೆ ಸೇರಿದ ಜಾಗ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಅವರು ನಮಗೆ ದಣಿಯಾಗಬೇಕು ಎಂದು ಹೇಳುತ್ತಾರೆ. ನಮ್ಮ ವರ್ಗ ಜಾಗಕ್ಕೆ ತಾಗಿಕೊಂಡಿರುವ ಜಾಗವನ್ನು ದಣಿಯವರು ದರ್ಖಾಸು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾವು ಬರುವ ಮುಂಚೆ ಅವರಿಗೆ ದರ್ಖಾಸು ಇತ್ತು ಎಂದು ಹೇಳುತ್ತಾರೆ.

2. ನೀವು ಅಕ್ರಮ ಸಕ್ರಮ ಮಾಡಿದ್ದೇನೆ ಎಂದು ಹೇಳುವ ಜಾಗ ಮಂಜೂರಾಗಿದೆಯಾ ಎಂದರೆ ಇಲ್ಲ, ಆದರೆ ಆದೇಶ ಮಾಡಿದ್ದಾರೆ. ಏನು ಆದೇಶ ಮಾಡಿದ್ದಾರೆ ಎಂದರೆ ನಿಮ್ಮ ಹೆಸರಿಗೆ ಮಂಜೂರು ಮಾಡುತ್ತೇವೆ ಎಂದು ಆದೇಶ ಮಾಡಿದ್ದಾರೆ ಎಂದು ಹೇಳುತ್ತಾರೆ, ಆದರೆ ಮಂಜೂರು ಆಗಿರುವುದಿಲ್ಲ. ನೀವು ಅಕ್ರಮ ಸಕ್ರಮ ಮಾಡಿದ ಜಾಗದ ಸರ್ವೇ ನಂಬರ್ ಏನು ಎಂದರೆ ಸಾಕ್ಷಿ ಸರ್ವೇ ನಂ. 112 ರಲ್ಲಿ 1 ಹಿಸ್ಸೆ ಎಂದು ಹೇಳುತ್ತಾರೆ. ಪಟ್ಟಾ ಜಾಗಕ್ಕೆ ಲಗ್ತಿಯಾಗಿ ಈ ಜಾಗ ಇರುವುದಿಲ್ಲ

ಎಂದರೆ ಇದೆ, ಸಾಕ್ಷಿ ಮುಂದುವರಿದು ಆ ಜಾಗ ಬೇರೆ ಈ ಜಾಗ ಬೇರೆ, ನನ್ನ 4 ಎಕರೆ ದರ್ಖಾಸು ಬೇರೆ ಇದ್ದು, ಅಕ್ರಮ ಸಕ್ರಮಕ್ಕೆ ನೀಡಿದ 4 ಎಕರೆ ಜಾಗ ಬೇರೆ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಯ ಜಾಗದ ಸರ್ವೇ ನಂಬರ್ ಗೊತ್ತಾ ಎಂದರೆ ಸಾಕ್ಷಿ ಸರ್ವೇ ನಂ. 165/2 ತಣ್ಣೀರುಪಂಥ ಗ್ರಾಮ ಎಂದು ಹೇಳುತ್ತಾರೆ. ಅವರಿಗೆ ಎಷ್ಟು ಜಾಗ ಇದೆ ಎಂದರೆ 4 ಎಕರೆ ಇರುತ್ತದೆ. ಅವರಿಗೆ ಹೇಗೆ ಮಂಜೂರಾಗಿದೆ ಎಂದರೆ ನಮ್ಮ ದಣಿಗಳಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಅಕ್ರಮ ಸಕ್ರಮ ಮಾಡಿದ ಜಾಗದ ಗಡಿಗುರುತು ಗೊತ್ತಾ ಎಂದರೆ ಸಾಕ್ಷಿ ಪೂರ್ವಕ್ಕೆ 4 ಎಕರೆ ಉಳಿದ ಜಾಗ, ಪಶ್ಚಿಮಕ್ಕೆ ಸರ್ವೇ ನಂ. 17/2 ಮತ್ತು 17/3 ಇರುತ್ತದೆ, ದಕ್ಷಿಣಕ್ಕೆ ಸರ್ವೇ ನಂ. 17/4 ಮತ್ತು 17/5 ಇರುತ್ತದೆ, ಉತ್ತರಕ್ಕೆ ಸರ್ವೇ ನಂ. 112/1 ಮತ್ತು ಸರ್ವೇ ನಂ. 16 ಇರುತ್ತದೆ ಎಂದು ಹೇಳುತ್ತಾರೆ.

3. ಪ್ರತಿವಾದಿಯರು ಏನು ಉಪದ್ರ ಮಾಡಿದ್ದಾರೆ ಎಂದರೆ ಸಾಕ್ಷಿ ಬೇಲಿ ತೆಗೆದಿದ್ದಾರೆ, ರಬ್ಬರ್ ತೆಗೆದಿದ್ದಾರೆ, ತೆಂಗಿನ ಮರವನ್ನು ತೆಗೆದಿದ್ದಾರೆ, ಗೇರು ಕೃಷಿಯನ್ನು ತೆಗೆದಿದ್ದಾರೆ, ಬೇಲಿ ಅಗಳನ್ನು ಹಾಳು ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಈ ಮೇಲೆ ಹೇಳಿದ ಬೌಂಡರಿಯಲ್ಲಿ ಅಕ್ರಮ ಸಕ್ರಮ ಜಾಗ ಇಲ್ಲ ಎಂದರೆ ಸರಿಯಲ್ಲ. 40 ವರ್ಷಗಳಿಂದ ಅಲ್ಲೆ ಇದ್ದೇನೆ ಎಂದು ಹೇಳುತ್ತಾರೆ. ನನಗೆ ಮದುವೆಯಾಗಿ 60 ವರ್ಷ ಆಗಿರುತ್ತದೆ. ಮದುವೆಯಾಗಿ ಬಂದ ಕೂಡಲೇ ಅರ್ಜಿ ಕೊಟ್ಟಿದ್ದಿರಾ ಎಂದರೆ ಇಲ್ಲ. ನಿಮ್ಮ ಪಟ್ಟಾ ಜಾಗದ ಆರ್.ಟಿ.ಸಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಹೌದು. ನಿಮ್ಮ ಪಟ್ಟಾ ಜಾಗ ಯಾರ ಹೆಸರಿನಲ್ಲಿ ಇದೆ ಎಂದರೆ ಅದು ನನ್ನ ಹೆಸರಿನಲ್ಲಿ ಇರುವುದಿಲ್ಲ ಆದರೆ ಜಡ್ಜ್ ಮೆಂಟ್ ಆದ ಆಧಾರದ ಮೇಲೆ ನನ್ನದು ಎಂದು ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಜಡ್ಜ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ನಾನು ಹೇಳಿದ ಸರ್ವೇ ನಂಬರ್ ಗಳು ನನ್ನ ಹೆಸರಿನಲ್ಲಿ ಇಲ್ಲ, ಜಯವರ್ಮ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಆದ ಕಾರಣ ಆ ಸ್ವತ್ತುಗಳು ನಮ್ಮ ಜಾಗ ಅಲ್ಲ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಆದ ಜಡ್ಜ್ ಮೆಂಟ್ ಆಧಾರದ ಮೇಲೆ ನನ್ನ ಜಾಗ ಎಂದು ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು ಹೇಳಿದ ಜಾಗ ನಮ್ಮ ಸ್ವಾದೀನದಲ್ಲಿ ಇಲ್ಲ ಮತ್ತು ನನ್ನ ಹೆಸರಿನಲ್ಲಿ ಇಲ್ಲ ಎಂದು ಅನುಭವ ಕೊಡುತ್ತಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಯರು ನಿಮ್ಮ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಏನೆಲ್ಲಾ ಮಾಡಿದ್ದಾರೆ ಎಂದರೆ ಸಾಕ್ಷಿ ಬೇಲಿ, ರಬ್ಬರ್, ಗೇರು ಮರವನ್ನು ಕಡಿದಿದ್ದಾರೆ ಎಂದು ಹೇಳುತ್ತಾರೆ. ಆನಂತರ

ಯಾವತ್ತಾದರೂ ಬಂದಿದ್ದಾರಾ ಎಂದರೆ 3ನೇ ತಾರೀಖು 8ನೇ ತಿಂಗಳು ಪುನಃ ಪ್ರತಿವಾದಿಯರು ಬಂದಿದ್ದಾರೆ ಎಂದು ಹೇಳುತ್ತಾರೆ. ಈಗ ಹೇಳಿದ ವಿಚಾರವನ್ನು ಹೊರತುಪಡಿಸಿ ಬೇರೆ ಏನು ಆಗಿಲ್ಲ ಎಂದರೆ ಹೌದು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

**(ಸಾ.ಓ.ಹೇ.ಕೇ.ಸ.ಇ.ಎ.ಒ)**